ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ನಾವು ಏನು ಮಾಡುವುದಕ್ಕೆ ಆಗುತ್ತದೆ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಅವರನ್ನು ಕರೆಯಿಸುವುದಕ್ಕೆ ನೀವು ಪ್ರಯತ್ನ ಮಾಡಿ; ಸುಮ್ಮನೆ ಏನೇನೋ ಮಾತನಾಡಿದರೆ ಹೇಗೆ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ,

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ,—ಇಲ್ಲದೇ ಹೋದರೆ ಅಸೆಂಬ್ಲಿ ಕ್ಲೋಸ್ ಆಗಿದೆಯೆಂದು ಅನೌನ್ಸ್ ಮಾಡಿಬಿಡಿ

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಎಲ್ಲಾ ವಿಷಯವೂ ಚೆನ್ನಾಗಿ ಗೊತ್ತುಂಟು. ಈ ಪಟ್ಟಿಯಲ್ಲಿ ಯಾವ ಸದಸ್ಯರನ್ನು ನಾವು ಹೊರಗೆ ಹಾಕಿಲ್ಲ, ಮತ್ತು ಯಾವ ಸದಸ್ಯರು ಒಳಗೆ ಬರಬೇಡಿ ಎಂದು ನಾವು ಹೇಳಿಲ್ಲ. ಹೊರಗಡೆ ಅವರ ಇಚ್ಛೆಯಂತೆ ಉಳಿದರೆ ಅವರನ್ನು ಬಲಾತ್ಕಾರವಾಗಿ ಒಳಗೆ ಕರೆದುಕೊಂಡು ಬರುವುದಕ್ಕಾಗುವುದಿಲ್ಲ. ನಾವು ಯಾರು ಒಳಗೆ ಬರದ ಹಾಗೆ ಬಾಗಿಲು ಹಾಕಿ ಚಿಲಕ ಹಾಕಿದ್ದೇವೆಯೇ ? ರಂಜು ಪುಸ್ತಕದಲ್ಲಿ ದಿನವೂ ರಂಜು ಹಾಕಿ ಹೋಗುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಆಪರನ್ನು ಒಳಗೆ ಬರುವಂತೆ ನಾವು ಕೇಳಿದ್ದಕ್ಕೆ, ರಾಮಕೃಷ್ಣ ಹೆಗಡೆಯವರೇ ಮಾತನಾಡುವುದಕ್ಕೆ ಬರಲಿ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಕ್ವೆಶ್ಚನ್ ಅವರ್ ಮುಗಿಯಲಿ.

ಶ್ರೀ ಬಿ. ರಾಚಯ್ಯ.—ಕೆಲಸ ಮಾಡದೆ ರುಜು ಹಾಕಿ ಹೊರಗೆ ಹೋಗುತ್ತಿದ್ದಾರೆ.

ಅಧ್ಯಕ್ಷರು.—ಅವರಿಗೆ ಸಿನ್ಸಿಯರ್ ಆಗಿ ಕೆಲಸ ಮಾಡುವುದು ಬೇಕಾಗಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು,—ಶ್ರೀ ಜ್ಞಾನದೇವ ದೊಡ್ಡಮೇಟಿಯವರು ೧೩೭ನೇ ಪ್ರಶ್ನೆಯನ್ನು ಕೇಳಿ

ಕೇಂದ್ರದ ಆರ್ಥಿಕ ನೀತಿಯಿಂದ ರಾಜ್ಯದ ಮೇಲಾಗಿರುವ ಪರಿಣಾಮ

೬೭೫. ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆರ್ಥಿಕ ಶಿಸ್ತನ್ನು ತಂದುಕೊಳ್ಳುವಲ್ಲಿ ಸರ್ಕಾರವು ಕೈಕೊಂಡ ಕ್ರಮಗಳೇನು ?

ಆ) ಕೇಂದ್ರದ ಆರ್ಥಿಕ ನೀತಿಯಿಂದ (ಓವರ್ ಡ್ರಾಫ್ಟ್ ಸೌಲಭ್ಯ ನಿಲ್ಲಿಸಿದ್ದು) ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟಾಗುತ್ತಿರುವ ಪರಿಣಾಮವೇನು ?

ಇ) ವ್ಯತಿರಿಕ್ತ ಪರಿಣಾಮ ಬೀರಿದಲ್ಲಿ ಸರ್ಕಾರವು ಇದರ ನಿವಾರಣೆಗೆ ಕೈಕೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳಲು ಸರ್ಕಾರವು ಮಿತವ್ಯಯ ಆದೇಶಗಳನ್ನು ಕಾಲದಿಂದ ಕಾಲಕ್ಕೆ ಜಾರಿಗೊಳಿಸುತ್ತಿದೆ.

ಆ) ಈಗ ಚಾಲ್ತಿಯಲ್ಲಿರುವ ಓವರ್‌ಡ್ರಾಫ್ಟ್ ನಿಯಮಗಳಂತೆ ರಾಜ್ಯ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕಿನ ತನ್ನ ಲೆಕ್ಕದಿಂದ ಓವರ್ ಡ್ರಾಫ್ಟ್ ಮಿತಿ ಮೀರಿದ ಹಣವನ್ನು ಏಳು ಕೆಲಸದ ದಿನಗಳ ಕಾಲಾವಧಿಗೂ ಮೀರಿ ತೆಗೆಯುವ ಹಾಗಿಲ್ಲ. ಇದು ರಾಜ್ಯ ಸರ್ಕಾರದ ವ್ಯವಹಾರದ ಮೇಲೆ ಬಹಳ ಒತ್ತಡವನ್ನು ಉಂಟುಮಾಡುತ್ತದೆ.

ಇ) ಅರ್ಧೀಪಾಯು ಪತ್ರ ಮತ್ತು ಅಗ್ರಿಮಧನದ ಮಿತಿಯನ್ನು ಹೆಚ್ಚಿಸುವಂತೆಯೂ ಮತ್ತು ಓವರ್ ಡ್ರಾಫ್ಟ್ ಸೌಲಭ್ಯಗಳನ್ನು ಪಡೆಯುವಲ್ಲಿ ಈಗ ಚಾಲ್ತಿಯಲ್ಲಿರುವ ಏಳು ದಿನಗಳ ಕಾಲಾವಧಿಯನ್ನು

ಕನಿಷ್ಟ ಇಪ್ಪತ್ತೊಂದು ದಿನಗಳಿಗೆ ಹೆಚ್ಚಿಸುವಂತೆಯೂ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ. ಆದರೆ ಕೇಂದ್ರ ಸರ್ಕಾರವು ಈ ಸಲಹೆಗಳನ್ನು ಒಪ್ಪುತ್ತಿಲ್ಲ.

ಶ್ರೀ ಜಿ.ಎಸ್.ದೇವ ಎಸ್. ದೊಡ್ಡಮೇಟಿ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಪಂಚಾಯತ್ ಮಂತ್ರಿ ಯವರು ಉತ್ತರದಲ್ಲಿ ಕೇಂದ್ರ ಸರ್ಕಾರದವರು ಈ ಸಲಹೆಗಳನ್ನು ಒಪ್ಪುತ್ತಿಲ್ಲ ಎಂದು ಹೇಳಿದ್ದಾರೆ. ಈ ಸಲಹೆಗಳನ್ನು ಒಪ್ಪುತ್ತಿಲ್ಲ ಎಂದಮೇಲೆ, ರಾಜ್ಯ ಸರಕಾರ ಮತ್ತೆಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಇಚ್ಛೆ ಮಾಡುತ್ತದೆ ? ಹಾಗೆಯೇ ಮಿತವ್ಯಯ ಎಂದು ಹೇಳುತ್ತಾರೆ. ಇದರಿಂದ ಬಂದ ಉಳತಾಯದ ಬಾಬತ್ತು ಎಷ್ಟು, ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳುವುದು ಕೇಂದ್ರ ಸರಕಾರದ ಕರ್ತವ್ಯ ಇದ್ದರೂ ಕೂಡ, ಅಲ್ಲಿನ ಒಂದು ಅಶಿಸ್ತಿನ ಪರಿಣಾಮವು ನಮ್ಮ ಮೇಲೆಯೂ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಮಿತವ್ಯಯದಿಂದ ಒಟ್ಟು ಯೋಜನೇತರ ವೆಚ್ಚದಲ್ಲಿ ಶೇಕಡ ೧೦ರಷ್ಟನ್ನು ಕಡಿತ ಮಾಡಿ ಉಳಿಸಬೇಕೆಂದು ನಮ್ಮ ಉದ್ದೇಶವಾಗಿದೆ. ಆದರೆ ಈ ಉದ್ದೇಶವನ್ನು ನೂರಕ್ಕೆ ನೂರರಷ್ಟು ಪಾಲಿಸುವುದು ಕಷ್ಟ. ಉದಾಹರಣೆಗೆ ಹೇಳುವುದಾದರೆ, ಪೋಲೀಸ್ ಇಲಾಖೆಯಲ್ಲಿ ದರೋಡೆಗಳು ಆಗುತ್ತಾ, ಇರುತ್ತವೆ. ಆಗ ಪೋಲೀಸರ ಸಂಖ್ಯೆಯನ್ನು ಸಹಜವಾಗಿ ಹೆಚ್ಚಿಗೆ ಮಾಡಬೇಕಾಗುತ್ತದೆ. ಇಲಾಖೆಗೆ ಹೆಚ್ಚಿನ ವಾಹನ ಸೌಕರ್ಯವನ್ನು ಒದಗಿಸಬೇಕಾಗುತ್ತದೆ. ಇನ್ನಿತರ ಅಧಿಕ ಆಧುನಿಕ ಉಪಕರಣಗಳನ್ನು ಒದಗಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಶಾಲೆಗಳನ್ನು ಶುರು ಮಾಡುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಹಾಗೆಯೇ ಶಾಲೆಗಳಿಗೆ ಬೇಕಾಗಿರುವ ಶಿಕ್ಷಕರ ನೇಮಕಾತಿಗಳನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಹೀಗೆ ಕೆಲವು ಖಾತೆಗಳಲ್ಲಿ ಮುಖ್ಯವಾಗಿ ಆರ್ಥಿಕ ಇಲಾಖೆಯೂ ಬಂತು. ಎಷ್ಟು ಪ್ರಯತ್ನಗಳನ್ನು ಮಾಡಿದರೂ ಶೇಕಡ ೧೦ರಷ್ಟು ವೆಚ್ಚವನ್ನು ಕೂಡ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ.

ಈಗ ನಾವು ಮುಖ್ಯವಾಗಿ ಎರಡು ಕಾರ್ಯಕ್ರಮಗಳನ್ನು ಅನುಸರಿಸಿ, ಈ ವೆಚ್ಚವನ್ನು ಕಡಿಮೆ ಮಾಡಲಿಕ್ಕೆ ಮತ್ತಾ, ನಮ್ಮ ರಿಸೋರ್ಸನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಮೊದಲನೆಯದಾಗಿ ಈಗಾಗಲೇ ಹೇಳಿದ ಹಾಗೆ, ಕಟ್ಟುನಿಟ್ಟಿನಿಂದ ಮಿತವ್ಯಯದ ರೂಢಿಯನ್ನು ಜಾರಿಯಲ್ಲಿ ತರತಕ್ಕಂಥಾದ್ದು, ಎರಡನೇಯದು ಈಗಾಗಲೇ ಬಾಕಿ ಉಳಿದಿರತಕ್ಕಂಥ ಹಣವನ್ನು ವಸೂಲು ಮಾಡತಕ್ಕಂಥಾದ್ದು ಇದರ ಬಗ್ಗೆ ತೀವ್ರತರವಾದಂತಹ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಮೊನ್ನೆ ತಾನೆ ಕೇಂದ್ರ ಸರಕಾರದವರು ಕೇಂದ್ರಸರಕಾರದ ಕರ್ಮಚಾರಿಗಳಿಗೆ ಮತ್ತೊಂದು ಡಿ.ಎ.ಯನ್ನು ಕೊಡತಕ್ಕಂಥ ಘೋಷಣೆಯನ್ನು ಮಾಡಿದರು. ಕೇಂದ್ರಸರಕಾರದ ಕರ್ಮಚಾರಿಗಳಿಗೆ ವಿಶೇಷ ತುಟ್ಟಿಭತ್ಯೆಯನ್ನು ಕೊಟ್ಟಾಗ, ನಮ್ಮ ಸರ್ಕಾರದ ಸಿಬ್ಬಂದಿವರ್ಗಕ್ಕೆ ಕೂಡ ಅದನ್ನು ಕೊಡಲೇ ಬೇಕಾಗುತ್ತದೆ. ಇದು ನಾವು ಅನುಸರಿಸಿಕೊಂಡು ಬಂದಂಥ ಪದ್ಧತಿ ಮತ್ತು ಅವರ ಜೊತೆಗೆ ನಾವು ಒಪ್ಪಿಕೊಂಡಿರತಕ್ಕಂಥ ಒಂದು ಒಪ್ಪಂದವಾಗಿದೆ. ಅದೂ ಕೂಡ ನಮ್ಮ ತಲೆಯ ಮೇಲೆ ಇದೆ.

ಕೇಂದ್ರ ಸರಕಾರದವರು ಪೆಟ್ರೋಲ್ ದರವನ್ನು ಇತ್ತೀಚೆಗೆ ಒಂದು ರೂಪಾಯಿಗಳಷ್ಟು ಲೀಟರ್ ಒಂದಕ್ಕೆ ಹೆಚ್ಚಿಗೆ ಮಾಡಿದರು. ಅದರ ನೇರವಾದ ಪರಿಣಾಮ ನಮ್ಮ ಎಲ್ಲಾ ಖಾತೆಯ ಮೇಲೆಯೂ ಆಗುತ್ತದೆ. ಅಂತೆಯೇ ಉಕ್ಕಿನ ಧಾರಣೆಯನ್ನು ಕೂಡ ಹೆಚ್ಚಿಗೆ ಮಾಡಿದರು.

ನಮ್ಮ ಪ್ರತಿಯೊಂದು ಎಂದರೆ ಪಿ.ಡಬ್ಲ್ಯು.ಡಿ. ಇರಲಿ, ಇರಿಗೇಷನ್ ಇರಲಿ, ಕಟ್ಟಡ ಕಟ್ಟುತಕ್ಕಂತಹ ಕಾರ್ಯಕ್ರಮವಿರಲಿ ಅದರ ವೆಚ್ಚ ಇದರಿಂದಾಗಿ ಹೆಚ್ಚಾಗುತ್ತಾ ಹೋಗುತ್ತದೆ. ಹೀಗೆ ಕೇಂದ್ರ ಸರಕಾರದವರು ಯಾವ ಒಂದು ನಿರ್ಣಯ ತೆಗೆದುಕೊಳ್ಳುತ್ತಾರೆಯೋ ಅದರ ಪರಿಣಾಮ ನಮ್ಮ ಸರಕಾರದ ಬಡ್ಜೆಟ್ಟಿನ ಮೇಲೆ ವಿರುದ್ಧವಾಗಿ, ವಿಪರೀತವಾಗಿ ಆಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮೊನ್ನೆ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ಎಲ್ಲರೂ ಸೇರಿ ಓವರ್ ಡ್ರಾಫ್ಟ್ ಸೌಲಭ್ಯ ಏನು ಒಂದು ವಾರಕ್ಕೆ ಇದೆ, ಅದನ್ನು ಮೂರು ವಾರಕ್ಕೆ ಕೊಡಬೇಕೆಂದು ಮೆಮೊರ್ಯಾಂಡಮ್ ಕೊಟ್ಟಿದ್ದೀರಿ ಅದರ ಗತಿ ಏನಾಯಿತು? ಕೇಂದ್ರದಿಂದ ನಮಗೆ ಬರಬೇಕಾದ ಬಾಕಿ ೬೦೦ ಕೋಟಿ ರೂಪಾಯಿ ಇದೆ. ಎಕ್ಸೈಸ್ ಡ್ಯೂಟಿ, ಇನ್‌ಕಂ ಟ್ಯಾಕ್ಸ್ ಎಲ್ಲಾ ಬರಬೇಕೆಂದು ಇದೆ. ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ ನಮ್ಮ ಪಾಲನ್ನು ನಾವು ಏಕೆ ಬಿಡಬೇಕು. ನಮ್ಮ ಪಾಲನ್ನು ನಾವು ಏಕೆ ಬಿಡಬೇಕು ಏಕೆ ದಯಾಯಿಸಿ ಕೊಡಿ ಎಂದು ಕೇಳಬಾರದು. ನಮ್ಮ ಸರಕಾರಕ್ಕೆ ಬರಬೇಕಾದ ಮೊತ್ತ ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರದಿಂದ ನಮಗೆ ಬರತಕ್ಕಂತಹ ಹಣ ಬರುತ್ತದೆ. ಸ್ವಲ್ಪ ತಡವಾಗಿ ಬರಬಹುದೆಂ. ಉದಾಹರಣೆಗೆ ಹೇಳುವುದಾದರೆ ರಾಷ್ಟ್ರೀಯ ಉಳಿತಾಯದಲ್ಲಿ ನಮಗೆ ಬರತಕ್ಕಂತಹ ಪಾಲು ಎನಿದೆ ಅದು ನಾವು ಹಣವನ್ನು ಕಟ್ಟಿದ ಮೇಲೆ ಒಂದು ತಿಂಗಳು. ಎರಡು ತಿಂಗಳು, ಆಥವಾ ಮೂರು ತಿಂಗಳಾದ ಮೇಲೆ ಬರುತ್ತದೆ, ಪ್ರತಿ ತಿಂಗಳು ನಮಗೆ ವಾಪಸ್ ಕೊಡಬೇಕೆಂದು ಹೇಳಿದ್ದೇವೆ ಇನ್ನು ಅನೇಕ ಸಂದರ್ಭಗಳಲ್ಲಿ ನಮಗೆ ಬರತಕ್ಕಂತಹ ಹಣ ಲೆಕ್ಕಪತ್ರ ಫೈನಲೈಸ್ ಆಗದೇ ಇದ್ದುದರಿಂದಾಗಿ ಅಲ್ಲಿಯೇ ಉಳಿಯತಕ್ಕಂಥಾದ್ದು ಕೂಡ ಉದಾಹರಣೆ ಉಂಟು. ಮೊನ್ನೆ ನಾನಂ ಪ್ರಧಾನ ಮಂತ್ರಿಗಳನ್ನು ಭೇಟಿಯಾದಾಗ ನಾನಂ ಮತ್ತು ಇತರ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ಈವಿಚಾರವನ್ನು ಅವರ ಮುಂದೆ ಪುನಃ ಮಂಡಿಸಿದ್ದೇವೆ. ಅಂದರೆ ವೇಸ್ ಅಂಡ್ ಮೀನ್ಸ್, ಅಡ್ವಾನ್ಸಸ್ ಎನಿದೆ ಅದಕ್ಕೆ ಈಗ ಯಾವ ಒಂದು ಮಿತಿಯನ್ನು ಹಾಕಿರುತ್ತಾರೆಯೋ ಆ ಮಿತಿಯನ್ನು ಎರಡರಷ್ಟಕ್ಕೆ ಏರಿಸಬೇಕು. ಉದಾಹರಣೆಗೆ ಹೇಳುವುದಾದರೆ ಕರ್ನಾಟಕದಲ್ಲಿ ಅದು ೪೫ ಕೋಟಿ ರೂಪಾಯಿ ಇದ್ದರೆ ೯೦ ಕೋಟಿ ರೂಪಾಯಿಗೆ ಏರಿಸಬೇಕು. ಓವರ್ ಡ್ರಾಫ್ಟ್‌ಗೆ ಕಟ್ಟುನಿಟ್ಟಾದ ನಿಯಮವಂನನ್ನು ಎಂತೆ ಜಾರಿಯಲ್ಲಿ ತರುತ್ತಿದ್ದಾರೆ ಅದು ನಾವು ವೇಸ್ ಅಂಡ್ ಮೀನ್ ಅಡ್ವಾನ್ಸ್ ಹೊರತಾಗಿ ನಾವು ಏನಾದರೂ ಹೆಚ್ಚು ಡ್ರಾ ಮಾಡಿದರೆ ಅದು ಎಷ್ಟೇ ಇರಲಿ ಹತ್ತು ಕೋಟಿ ರೂಪಾಯಿ ಇರಲಿ, ೨೦ ಕೋಟಿ ಇರಲಿ, ೪೦ ಕೋಟಿ ರೂಪಾಯಿ ಇರಲಿ ಅಥವಾ ಹತ್ತು ರೂಪಾಯಿ ಇರಲಿ ಓವರ್ ಡ್ರಾಫ್ಟ್ ಅನ್ನು ಒಂದಂ ವಾರಕ್ಕಿಂತ ಹೆಚ್ಚು ನಾವು ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಒಂದು ವಾರವಾದ ತಕ್ಷಣ ಒಂದು ವಾರಕ್ಕೆ ಇಂತಿಷ್ಟು ಓವರ್ ಡ್ರಾಫ್ಟ್ ಇದೆ ಇವತ್ತೇ ಅದನ್ನು ಪೇಮೆಂಟ್ ಮಾಡಬೇಕು ಅದಿಲ್ಲದಿದ್ದರೆ ನಾವು ನಿಮ್ಮ ಚೆಕ್ಕನ್ನು ಇನ್ನು ಮುಂದೆ ಡಿಸ್‌ಆನರ್ ಮಾಡುತ್ತೇವೆಂದು ಹೇಳುತ್ತಾರೆ. ಕೇರಳದಲ್ಲಿ ಅಂತಹ ಒಂದು ಪ್ರಸಂಗ ಬಂತಂ. ಸುದೈವದಿಂದ ಅಂತಹ ಪ್ರಸಂಗ ನಮಗೆ ಇನ್ನೂ ಬಂದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ವಾರವಾದ ಮೇಲೆ ಒಂದು ದಿವಸ ಕೂಡ ಕೊಡುವುದಿಲ್ಲ ಚೆಕ್ಸ್ ಅನ್ನು ಡಿಸ್ ಆನರ್ ಮಾಡುತ್ತಾರೆಂದು ಹಾಗೆ ಹೇಳುವವರು ನಮಗೆ ಕೊಡ ಬೇಕಾದುದರ ಬಗ್ಗೆ ವಾರ ಮುಂತಾದ ಲೆಕ್ಕವನ್ನು ಏಕೆ ನೋಡಬೇಕು? ನಮಗೆ ಸುಮಾರು ೬೪೦ ಕೋಟಿ ರೂಪಾಯಿಗಳು ಬರಬೇಕಾಗುತ್ತದೆ. ನವಂಗೆ ಫೈನಾನ್ಸ್ ಕ್ರೈಸಿಸ್ ಉಂಟು. ನಮ್ಮ ಕಮಿಟ್‌ಮೆಂಟ್ ಅನ್ನು ಹಾನರ್ ಮಾಡುವುದಕ್ಕಾಗುತ್ತಿಲ್ಲ. ಅಂತಹ ಪರಿಸ್ಥಿತಿ ಇರುವಾಗ ನಮ್ಮ ಹಣ ನೀವು ಹೇಗೆ ವಸೂಲು ಮಾಡುತ್ತೀರೋ ಅದೇ ರೀತಿ ನವಂಗೆ ಕೊಡಬೇಕಾದುದನ್ನು ಕೊಡಿ ಎಂದು ಏಕೆ ಕೇಳಬಾರದು?

ಶ್ರೀ ರಾಮಕೃಷ್ಣ ಹೆಗಡೆ.—ಕೇಳಿದ್ದೇನೆ. ಅನೇಕ ಸಲ ಕೇಳಿದ್ದೇನೆ. ರಿಸರ್ವ್ ಬ್ಯಾಂಕ್ ಅವರ ಕೈಯಲ್ಲಿ ಇದೆ ಬೇರೆ ಬೇರೆ ಬ್ಯಾಂಕ್‌ಗಳ ಮೇಲೂ ಕೂಡ ಅವರದ್ದೇ ಆದ ಅಧಿಕಾರ ಇದೆ. ನಾವೇನಾದರೂ ಡೆಫಿಸಿಟ್ ಫೈನಾನ್ಸ್ ಅನ್ನು ಮಾಡಿ ಒಂದು ಮಿತಿಗೆ ಒಂದು ಚೂರಾದರೂ ಹೆಚ್ಚು ಮಾಡಿದರೆ ತಕ್ಷಣ ಕ್ರಮ ತೆಗೆದುಕೊಳ್ಳತಕ್ಕಂತಹ ಅಧಿಕಾರ ಅವರ ಕೈಯಲ್ಲಿ ಇದೆ ಉಪಾಯ ಅವರ ಕೈಯಲ್ಲಿ ಇದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ರಾಜ್ಯ ಸರ್ಕಾರ ಎಷ್ಟೇ ಡೆಫಿಸಿಟ್ ಫೈನಾನ್ಸಿಂಗ್ ಮಾಡಿದರೂ ಕೂಡ ಒಟ್ಟು ಬಡ್ಜೆಟ್ಟಿನ ಶೇಕಡ ಒಂದರಷ್ಟಕ್ಕಿಂತ ಹೆಚ್ಚಾಗುವ ಸಾಧ್ಯತೆ ಇಲ್ಲ. ಅಂದರೆ ಇದು ಒಂದು ಪರ್‌ಸೆಂಟ್ ಆಗುತ್ತದೆ. ಆದರೆ ಕೇಂದ್ರ ಸರ್ಕಾರದ್ದು ಹತ್ತು ಪರ್ಸೆಂಟ್ ವರೆಗೆ ಇವತ್ತು ಡೆಫಿಸಿಟ್ ಫೈನಾನ್ಸಿಂಗ್ ಇದೆ. ಅವರಂ ಓವರ್ ಡ್ರಾಫ್ಟನ್ನು ಬೇಕಾದಷ್ಟು ಮಾಡಿ ಕೊಳ್ಳಬಹುದು. ಅವರು ರಿಸರ್ವ್ ಬ್ಯಾಂಕ್‌ನಿಂದ ಬೇಕಾದಷ್ಟು ಹಣವನ್ನು ತೆಗೆದುಕೊಳ್ಳಬಹುದು ಮತ್ತು ನಾಣಿಕ್ ಪ್ರೆಸ್‌ನಿಂದ ಬೇಕಾದಷ್ಟು ಹಣವನ್ನು ಅವರು ಮುದ್ರಣ ಮಾಡಬಹುದು, ಅವರ ಮೇಲೆ ಯಾವುದೇ ತರಹದ ಹತೋಟಿ ಕಂಟ್ರೋಲ್ ಇಲ್ಲ, ಅದೇ ರೀತಿಯಾಗಿ ನಾವು ಹೇಳುತ್ತಾ ಬಂದಿದ್ದೇವೆ, ದೇಶದ ಆರ್ಥಿಕ ಪರಿಸ್ಥಿತಿ ಭದ್ರವಾಗಿರಬೇಕಾದರೆ ರಾಜ್ಯ ಸರ್ಕಾರದ ಆರ್ಥಿಕ ವ್ಯವಹಾರದ ಮೇಲೆ ಯಾವ ರೀತಿ ಕಟ್ಟುನಿಟ್ಟಾದಂಥ ದೃಷ್ಟಿ ಇರಬೇಕೋ ಅದೇ ರೀತಿ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರದ ಮೇಲೆ ಇರಬೇಕು, ಇದು ನಮ್ಮ ಬಹಳ ವರ್ಷಗಳ ವಾದ ಕೂಡ ಅದನ್ನು ಅವರು ಒಪ್ಪುತ್ತಾ ಇಲ್ಲ.